ವಿತ್ತೀಯ ಲೆಕ್ಕಪತ್ರಗಳು ಹಾಗೂ ಸದರಿ ಸಾಲುಗಳ ಮೇಲೆ ಭಾರತದ ನಿಯಂತ್ರಕ ಹಾಗೂ ಮಹಾ ಲೇಖಾ ಪರೀಕ್ಷಕರ ಸಿವಿಲ್ ವರದಿಗಳ ಬಗ್ಗೆ ಸಿಜೆನೇ ವರದಿ.

ಈ) ಕರ್ನಾಟಕ ರಾಜ್ಯದ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಕಾರ್ಯಕ್ರಮದ ಬಗ್ಗೆ ಸಿಒನೇ ವರದಿ.

ಉ) ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಗೆ ಸಂಬಂಧಿಸಿದಂತೆ ೧೯೮೦-೮೫ನೇ ಸಾಲುಗಳಿಂದ ೧೯೮೪-೮೫ನೇ ಸಾಲುಗಳವರೆಗಿನ ಹಣ ವಿನಿಯೋಗ ಮತ್ತು ವಿತ್ತೀಯ ಲೆಕ್ಕಪತ್ರಗಳ ಮೇಲಿನ ಹಾಗೂ ಸದರಿ ಸಾಲುಗಳ ಬಗ್ಗೆ ಭಾರತದ ನಿಯಂತ್ರಕ ಹಾಗೂ ಮಹಾ ಲೇಖಾ ಪರೀಕ್ಷಕರ ವರದಿಗಳ ಬಗ್ಗೆ ಸಮಿತಿಯ ಸಿಒನೇ ವರದಿ.

ಶ್ರೀ ಜಮಖಂಡಿ.—ಮಾನ್ಯ ಅಧ್ಯಕ್ಷರೇ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಕಲ್ಯಾಣ ಸಮಿತಿ ಅಧ್ಯಕ್ಷನಾದ ನಾನು ಮೈಸೂರು ಹುಬ್ಬಳ್ಳಿ-ಧಾರವಾಡ ಮಹಾ ನಗರಪಾಲಿಕೆಯವರು ನೇಮಕಾತಿ, ಭಡ್ತಿ ಮತ್ತು ಕಲ್ಯಾಣ ಕಾರ್ಯಗಳನ್ನು ಜಾರಿಗೊಳಿಸುವಲ್ಲಿ ಅನುಸರಿಸಿರುವ ವಿಷಲಾತಿ ನೀತಿ ಬಗ್ಗೆ ಸಿಒನೇ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು —ವರದಿಯನ್ನು ಮಂಡಿಸಲಾಯಿತು.

ಗಮನ ಸೆಳೆಯುವ ಸೂಚನೆಗಳು

೨ ಮೈಸೂರು ನಗರದ ಚಾಮುಂಡಿ ವಿಹಾರದ ೧೨ ಎಕರೆ ಪ್ರದೇಶದ ಭೂಮಿಯಲ್ಲಿ ಗೃಹ ನಿರ್ಮಾಣ ಮಾಡುವ ಉದ್ದೇಶಕ್ಕೆ ದಿವಂಗತ ಒಡೆಯರ್ ಅವರ ಕುಟುಂಬಕ್ಕೆ ಅನುಮತಿ ನೀಡಿರುವುದು.

ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).—ಮಾನ್ಯ ಅಧ್ಯಕ್ಷರೆ, ಮೈಸೂರು ನಗರದ ಚಾಮುಂಡಿ ವಿಹಾರದ ೧೨ ಎಕರೆ ಪ್ರದೇಶದ ಭೂಮಿಯನ್ನು ಗೃಹ ನಿರ್ಮಾಣ ಮಾಡುವ ಉದ್ದೇಶದಿಂದ ದಿವಂಗತ ಒಡೆಯರ್‌ರವರ ಕುಟುಂಬಕ್ಕೆ ಸರ್ಕಾರ ಅನುಮತಿ ನೀಡಿರುವ ಬಗ್ಗೆ ನಗರಾಭಿವೃದ್ಧಿ ಹಾಗೂ ಲೋಕೋಪಯೋಗಿ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮತ್ತು ಲೋಕೋಪಯೋಗಿ ಖಾತೆ ಸಚಿವರು).—ಮಾನ್ಯ ಅಧ್ಯಕ್ಷರೇ ಶ್ರೀಮತಿ ವಿಶಾಲಾಕ್ಷಿದೇವಿ, ಶ್ರೀಮತಿ ಇಂದಿರಾಕ್ಷಿದೇವಿ ಮತ್ತು ಶ್ರೀಮತಿ ಕಾಮಾಕ್ಷಿದೇವಿ ಇವರುಗಳು (ದಿವಂಗತ ಮೈಸೂರು ಮಹಾರಾಜರ ಮಕ್ಕಳು) ಮೈಸೂರು ಚಾಮುಂಡಿ ವಿಹಾರದಲ್ಲಿ ತಾವು ಹೊಂದಿರುವ ತಲಾ ೪ ಎಕರೆ ಜಮೀನಿಗೆ (ಒಟ್ಟು ೧೨ ಎಕರೆ) ತಮ್ಮ ಆರ್ಥಿಕ ಸಂಕಷ್ಟಗಳನ್ನು ಪರಿಹರಿಸಿಕೊಳ್ಳುವ ಉದ್ದೇಶದಿಂದ ನಗರ ಭೂ (ಪರಿಮಿತಿ ಮತ್ತು ನಿಯಂತ್ರಣ) ಕಾಯ್ದೆ, ೧೯೭೬ರ ಅಸ್ತಿತ್ವ ವಿನಾಯಿತಿ ಮತ್ತು ಅದನ್ನು ಮಾರಾಟ ಮಾಡಲು ಪರವಾನಗಿ ಕೋರಿ ಅರ್ಜಿ ಸಲ್ಲಿಸಿದ್ದರು ಸದರಿ ಮನವಿಗಳ ಮೇಲೆ ಅಧಿಕ ವಿಶೇಷ ಜಿಲ್ಲಾಧಿಕಾರಿ, ನಗರ ಭೂ ಪರಿಮಿತಿ, ಬೆಂಗಳೂರು ಇವರಿಂದ ವರದಿ ತರಿಸಿ ಪರಿಶೀಲಿಸಲಾಗಿದೆ ಸದರಿ ವರದಿಯಂತೆ ಅರ್ಜಿದಾರರುಗಳು ಮೈಸೂರು ಚಾಮುಂಡಿ ವಿಹಾರ್‌ನ ಬ್ಲಾಕ್ ನಂ. ೨೦, ೨೧ ಮತ್ತು ೨೨ರಲ್ಲಿ ತಲಾ ೧೬,೧೮೭ ಚ.ಮೀ ವಿಸ್ತೀರ್ಣದ ಖಾಲಿ ಜಮೀನನ್ನು ಹೊಂದಿರುವುದಾಗಿ ನಿರ್ಧರಣೆ ಮಾಡಿ, ಅವರು ಪಡೆಯಲಿರುವ ಆರ್ಥಿಕ ಸಂಕಷ್ಟಗಳನ್ನು ಪರಿಗಣಿಸಿ ಮನವಿಗಳನ್ನು ಪುರಸ್ಕರಿಸಲು ಅವರ ವರದಿಯ ದಿನಾಂಕ ೨೫-೪-೮೮ರಲ್ಲಿ ಶಿಫಾರಸ್ಸು ಮಾಡಿದ್ದರು.

೨ ಚಾಮುಂಡಿ ವಿಹಾರದ ಆವರಣದಲ್ಲಿ ಒಂದು ದೇವಸ್ಥಾನ, ಅನೇಕ ನೌಕರರ ವಸತಿ ಗೃಹಗಳು ಅಧಿಕಾರಿಗಳ ವಸತಿ ಗೃಹಗಳು, ಡ್ರೈವರ್‌ಗಳ ವಸತಿ ಗೃಹಗಳು, ಕಛೇರಿ ಕಟ್ಟಡಗಳು ಬಹು ಹಿಂದೆಯೇ ಕಟ್ಟಲ್ಪಟ್ಟಿವೆ, ಎಂದು ಸಕ್ಷಮ ಪ್ರಾಧಿಕಾರಿಗಳು ವರದಿ ಮಾಡಿದ್ದಾರೆ. ಸರ್ಕಾರವು ಕ್ರೀಡಾಂಗಣಕ್ಕೆ (ಸ್ಟೇಡಿಯಂ) ೧೫ ಎಕರೆ ಜಮೀನನ್ನು ಮತ್ತು ಭಾರತೀಯ ವಾಯುದಳ ಸಂಸ್ಥೆಗೆ ೧೪ ಎಕರೆ ಜಮೀನನ್ನು ಈ ಪ್ರದೇಶದಲ್ಲಿ ಮಂಜೂರು ಮಾಡಲಾಗಿತ್ತು, ಹಾಗೂ ಈ ಜಾಗದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ನೌಕರರ ವಸತಿ ಗೃಹಗಳನ್ನು ನಿರ್ಮಿಸಿರುತ್ತಾರೆಂದೂ ಮತ್ತು ಅನೇಕ ಕಟ್ಟಡಗಳು ಈ ಪ್ರದೇಶ

ದಲ್ಲಿ ಬಂದಿರುವುದರಿಂದ, ಅಧಿಕ ವಿಶೇಷ ಜಿಲ್ಲಾಧಿಕಾರಿಗಳಿಂ ಸದರಿ ಬ್ಲಾಕ್ ನಂ. ೨೦, ೨೧ ಮತ್ತು ೨೨ರ ಜಮೀನಿನಂಗಳು ವಸತಿಗಾಗಿ ಯೋಗ್ಯವಾಗಿದೆ ಎಂದೂ ಅಭಿಪ್ರಾಯಪಟ್ಟಿರುತ್ತಾರೆ. ಪ್ರಸ್ತುತ ಜಮೀನುಗಳು ಬಯಲು ಜಾಗ ಮತ್ತು ಉದ್ಯಾನವನಕ್ಕಾಗಿ ಕಾದಿರಿಸಲಾದಾಗ್ಯೂ ಅದನ್ನು "ವಸತಿಗಾಗಿ ಅಥವಾ ವಸತಿಯೇತರ ಸಲುವಾಗಿ" ಭೂ ಬದಲಾವಣೆ ಮಾಡಲು ಮತ್ತು ಸದರಿ ಜಮೀನುಗಳಿಗೆ ವಿನಾಯ್ತಿ ನೀಡಿ ಮಾರಾಟ ಮಾಡಲು ಅನುಮತಿ ಕೊಡಬೇಕೆಂದು ಸರ್ಕಾರದ ಆದೇಶ ಕೋರಿದ್ದರು.

೩. ಅರ್ಜಿದಾರರುಗಳಾದ ಶ್ರೀಪತಿ ವಿಶಾಲಾಕ್ಷಿದೇವಿ, ಶ್ರೀಮತಿ ಕಾಮಾಕ್ಷಿದೇವಿ, ಮತ್ತು ಶ್ರೀವತಿ ಇಂದ್ರಾಕ್ಷಿದೇವಿ ಇವರುಗಳು ನಗರ ಭೂ ಪರಿಮಿತಿ ಕಾಯ್ದೆ ಅನುಷ್ಠಾನಕ್ಕೆ ಬರುವುದಕ್ಕಿಂತ ಮೊದಲೇ, ಅಂದರೆ ದಿನಾಂಕ ೧೭-೨-೧೯೭೬ ಕ್ಕಿಂತ ಮುಂಚಿತವಾಗಿ, ಅವರುಗಳು ಕ್ರಮವಾಗಿ ರೂ. ೯,೮೮,೦೦೦-೦೦, ರೂ. ೧೦,೦೯,೦೦೦-೦೦ ಮತ್ತು ರೂ. ೧೭,೯೩,೦೦೦-೦೦ ಗಳನ್ನು ಸರ್ಕಾರಕ್ಕೆ ಆದಾಯ್ತು ತೆರಿಗೆ ಮತ್ತು ಸರ್ಚಾರ್ಜು ಹಾಗೂ ಆಸ್ತಿ ತೆರಿಗೆಗಳನ್ನು ಕೊಡಬೇಕಾಗಿರುವುದಾಗಿ ಮತ್ತು ಬ್ಯಾಂಕ್ ಆಫ್ ಬರೋಡಾ ಮತ್ತು ಕೆನರಾ ಬ್ಯಾಂಕ್‌ಗಳಲ್ಲಿ ಹೊಂದಿರುವ ಸಾಲ ರೂ. ೨,೨೬,೩೫,೨೦೧ ಡಿಕ್ರಿ ಮಾಡಿರುವ ಬಗ್ಗೆ ದಾಖಲೆಪತ್ರಗಳನ್ನು ಒದಗಿಸಿ, ತಮಗೆ ಆರ್ಥಿಕ ಸಂಕಷ್ಟಗಳು ಇರುವುದಾಗಿ ಧೃಡಪಡಿಸಿರುತ್ತಾರೆ. ತಮ್ಮ ದಿನಾಂಕ ೨೫-೩-೧೯೯೮ರ ವರದಿಯಲ್ಲಿ ಅಧಿಕ ವಿಶೇಷ ಜಿಲ್ಲಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಗಳು ಈ ಮೂವರು ಅರ್ಜಿದಾರರ ಸಂಕಷ್ಟದ ಸಾಲಗಳ ಬಾಕಿಯು ೧೯೭೬ ರಿಂದ ಇಲ್ಲಿಯವರೆಗೆ ರೂ. ೭,೦೨,೧೮೭.೨೦ ಗಳು ಆಗಿದೆಯೆಂದು ವರದಿ ಮಾಡುತ್ತಾ, ಅರ್ಜಿದಾರರ ಕೋರಿಕೆಯನ್ನು ಪುರಸ್ಕರಿಸಿ ಸದರಿ ಜಮೀನುಗಳಿಗೆ ವಿನಾಯ್ತಿ ನೀಡಿ ಮಾರಾಟ ಮಾಡಲು ಅನುಮತಿ ನೀಡಲಂ ಶಿಫಾರಸು ಮಾಡಿದ್ದರು.

೪. ಆದರೆ ಮೈಸೂರು ನಗರ ಯೋಜನಾ ಪ್ರಾಧಿಕಾರ, ೨೬-೩-೧೯೯೮ರ ತನ್ನ ನಿರ್ಣಯದಲ್ಲಿ ಈ ಪ್ರಸ್ತಾವನೆಯನ್ನು ಪುರಸ್ಕರಿಸಿಲ್ಲ. ಈ ಜಮೀನುಗಳ ಕೆಲ ಭಾಗಗಳು ಈಗ ನಿರ್ಮಾಣವಾಗುತ್ತಿರುವ ಕ್ರೀಡಾಂಗಣಕ್ಕೆ ಉಪಯೋಗಿಸುತ್ತಿರುವುದರಿಂದ ಮತ್ತು ನಗರ ವ್ಯಾಪಕಾಭಿವೃದ್ಧಿ ಯೋಜನೆಯಲ್ಲಿ ಸದರೀ ಜಮೀನುಗಳನ್ನು ಬೈಲು ಪ್ರದೇಶಗಳಿಗಾಗಿ ಕಾದಿರಿಸಿರುವುದರಿಂದ ಸದರಿ ಜಮೀನಿಂಗಳನ್ನು ಬಯಲು ಪ್ರದೇಶವನ್ನಾಗಿಯೇ ಉಳಿಸಿಕೊಳ್ಳಬೇಕೆಂದು ನಗರ ಯೋಜನಾ ಪ್ರಾಧಿಕಾರದ ಅಭಿಪ್ರಾಯ.

೫. ಪ್ರಸ್ತುತ ಪ್ರಸ್ತಾವನೆಯನ್ನು ನಗರ ಭೂ (ಪರಿಮಿತಿ ಮತ್ತು ನಿಯಂತ್ರಣ) ಕಾಯ್ದೆ ೧೯೭೬ರ ಪರಿಚ್ಛೇದ ೨೦ (೧) (ಬಿ) ಅಡಿಯಲ್ಲಿ ಪರಿಶೀಲಿಸಿ ಅರ್ಜಿದಾರರು ಎದುರಿಸುತ್ತಿರುವ ಆರ್ಥಿಕ ಸಂಕಷ್ಟಗಳನ್ನು ಮನಗಂಡು, ನಗರ ಯೋಜನಾ ಪ್ರಾಧಿಕಾರ ಮೈಸೂರು, ಇವರ ಅಭಿಪ್ರಾಯವನ್ನು ಪರಿಗಣಿಸಿ ಮತ್ತು, ಈ ಪ್ರದೇಶಗಳ ಸುತ್ತ ಮುತ್ತ ಈಗಾಗಲೇ ಬಹಳ ಕಟ್ಟಡಗಳು ತಲೆ ಎತ್ತಿದೆ ಎಂಬ ಅಂಶವನ್ನು ಗಮನದಲ್ಲಿಟ್ಟುಕೊಂಡು ಈಗಾಗಲೇ ನಿರ್ಮಾಣವಾಗುತ್ತಿರುವ ಕ್ರೀಡಾಂಗಣ ಕಟ್ಟಡವು ಚಾಮುಂಡಿ ವಿಹಾರ್ ಬ್ಲಾಕ್ ನಂ. ೨೦, ೨೧ ಮತ್ತು ೨೨ರ ಭಾಗಶಃ ಪ್ರದೇಶದಲ್ಲಿ ಬರುವುದನ್ನು ಗಮನಿಸಿ, ಅರ್ಜಿದಾರರುಗಳು ಹೊಂದಿರುವ ತಲಾ ೧೬,೧೭೬.೨೮ ಚದರಮೀಟರ್ ಕ್ಷೇತ್ರದಲ್ಲಿ ಅವರವರ ಜಮೀನುಗಳಲ್ಲಿ ಕ್ರೀಡಾಂಗಣಕ್ಕೆ ಉಪಯೋಗವಾಗುತ್ತಿರುವ ಭಾಗಶಃ ಜಮೀನನ್ನು ಬಿಟ್ಟು, ಉಳಿಕೆ ಜಮೀನುಗಳಿಗೆ ವಿನಾಯ್ತಿ ನೀಡಿ ಸದರಿ ಜಮೀನುಗಳನ್ನು ಸಮೂಹ ವಸತಿ ಗೃಹಗಳನ್ನು ಕಟ್ಟಲು ವಂಶಿಂದೆ ಬಂದಿರುವ ಮೆ: ಕಾವೇರಿ ಡೆವಲಪರ್ಸ್, ಮೈಸೂರು ಇವರಿಗೆ ಮಾರಲು ಸರ್ಕಾರದ ಆದೇಶ ದಿನಾಂಕ ೨೩-೪-೨೦೦೦ ರಲ್ಲಿ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಅನುಮತಿ ನೀಡಿದೆ.—

(೧) ಅರ್ಜಿದಾರರುಗಳು ತಮ್ಮ ಜಮೀನುಗಳನ್ನು ಸಮೂಹ ಗೃಹ ನಿರ್ಮಾಣ ಮಾಡಲು ಮುಂದೆ ಬಂದಿರುವ ಕಾವೇರಿ ಎಸ್ಟೇಟ್ ಡೆವಲಪರ್ಸ್, ಮೈಸೂರು, ಇವರಿಗೆ ಮಾತ್ರ ಮಾರತಕ್ಕದ್ದು, ಹಾಗೂ ಮಾರಾಟದ ವ್ಯವಹಾರವನ್ನು ಆದೇಶದ ದಿನಾಂಕದಿಂದ ಒಂದು ವರ್ಷದೊಳಗೆ ಮುಗಿಸತಕ್ಕದ್ದು.

(೨) ಕೇಂದ್ರ ಸರ್ಕಾರದ ಸುತ್ತೋಲೆ ಸಂಖ್ಯೆ. ೯/೪೮/೭೬ ಯುಸಿಯು ದಿನಾಂಕ ೭-೫-೧೯೪೦ ರಲ್ಲಿನ ಸೂಚನೆಗಳನ್ನು ತಪ್ಪದೆ ಪಾಲಿಸತಕ್ಕದ್ದು.

(೩) ಅರ್ಜಿದಾರರುಗಳು ಮಾರಾಟದಿಂದ ಬಂದ ಹಣದಿಂದ ತಮ್ಮ ಸಾಲಗಳನ್ನು ತೀರಿಸಿಕೊಳ್ಳತಕ್ಕದ್ದು.

(೪) ಖರೀದಿದಾರರಾದ ಮೆ: ಕಾವೇರಿ ಎಸ್ಟೇಟ್ ಡೆವಲಪರ್ಸ್, ಮೈಸೂರು ಇವರು ಸದರಿ ಜಮೀನನ್ನು ಸಮೂಹ ಗೃಹಗಳ ನಿರ್ಮಾಣಕ್ಕಾಗಿ ಮಾತ್ರ ಉಪಯೋಗಿಸಬೇಕೂ ಹಾಗೂ ಜಮೀನಿನ ಪೂರ್ಣ ಭೂ ಉಪಯೋಗವು ಈ ಆದೇಶದ ದಿನಾಂಕದಿಂದ ಮೂರು ವರ್ಷಗಳಲ್ಲಿ ಮುಗಿಸತಕ್ಕದ್ದು.

(೫) ಸದರಿ ಜಮೀನಿನಲ್ಲಿ ಸಮೂಹ ವಸತಿ ಗೃಹಗಳ ಯೋಜನೆಯ ರೂಪುರೇಷೆ/ನಕ್ಷೆಯನ್ನು ನಗರ ಯೋಜನಾ ಪ್ರಾಧಿಕಾರ ಮತ್ತು ಅಭಿವೃದ್ಧಿ ಮಂಡಳಿ, ಮೈಸೂರು ಇವರುಗಳಿಗೆ ನಗದಿತ ಅಭಿವೃದ್ಧಿ ಶುಲ್ಕ ಇತ್ಯಾದಿ ಪಾವತಿ ಮಾಡಿ ಅನುಮೋದನೆ ಪಡೆಯತಕ್ಕದ್ದು.

(೬) ಶೇಕಡಾ ೧೦ರಷ್ಟು ವಸತಿ ಗೃಹಗಳನ್ನು ಸರ್ಕಾರಿ ನೌಕರರಿಗೆ ಮೈಸೂರು ನಗರಾಭಿವೃದ್ಧಿ ಮಂಡಳಿಯ ಬೆಲೆಗನುಗುಣವಾಗಿ ಮಾರತಕ್ಕದ್ದು.

(೭) ಸದರಿ ಜಮೀನಿನಲ್ಲಿ ನಿರ್ಮಿಸುವ ಸಮೂಹ ವಸತಿ ಗೃಹಗಳನ್ನು ಮೈಸೂರಿನ ನಗರ ಪ್ರದೇಶದಲ್ಲಿ ಸ್ವಂತ ವಸತಿ/ನಿವೇಶನ ಹೊಂದಿಲ್ಲದವರಿಗೆ ಮಾತ್ರ ಮಾರತಕ್ಕದ್ದು.

(೮) ಜಮೀನಿನ ಭೂ ಉಪಯೋಗದ ಬಗ್ಗೆ ಹಾಗೂ ಆದೇಶದ ಷರತ್ತುಗಳ ಪಾಲನೆಯ ಬಗ್ಗೆ ತನಿಖೆ ನಡೆಸುವ ಅಧಿಕಾರವನ್ನು ಜಿಲ್ಲಾಧಿಕಾರಿ ಹಾಗೂ ಸಕ್ಷಮ ಪ್ರಾಧಿಕಾರ ನಗರ ಭೂ ಪರಿಮಿತಿ ಮೈಸೂರು ಇವರಿಗೆ ನೀಡಲಾಗಿದೆ.

(೯) ಮೇಲಿನ (೫) ರಿಂದ (೮) ರಲ್ಲಿನ ಯಾವುದೇ ಷರತ್ತನ್ನು ಕ್ರಯದಾರರಾಗಲಿ, ಖರೀದಿದಾರರಾಗಲೀ ಉಲ್ಲಂಘಿಸಿದಲ್ಲಿ ಸರ್ಕಾರವು ನಗರ ಭೂ (ಪರಿಮಿತಿ ಮತ್ತು ನಿಯಮ) ಕಾಯ್ದೆ, ೧೯೭೬ರ ಪರಿಚ್ಛೇದ ೨೦ (೨)ರ ಪ್ರಕಾರ ದತ್ತ ಅಧಿಕಾರದಡಿಯಲ್ಲಿ ವಿನಾಯಿತಿಯನ್ನು ಹಿಂತೆಗೆದುಕೊಳ್ಳಲಾಗುವುದು.

ಶ್ರೀ ವೇದಾಂತ ಹೆಮ್ಮಿಗೆ.— ಮಾನ್ಯ ಅಧ್ಯಕ್ಷರೇ, ಈ ಸಾಲವನ್ನು ತೀರಿಸಬೇಕೆಂದು ಹೇಳಿ ಹಿಂದಿನ ರಾಜವಂಶಕ್ಕೆ ಸೇರಿದವರಂ ಯಾರು ಅರ್ಜಿಯನ್ನು ಹಾಕಿದ್ದಾರೆ ಅವರು ಆ ಸಾಲವನ್ನು ತೀರಿಸಬೇಕಾದರೆ ಅರ್ಬನ್ ಲ್ಯಾಂಡ್ ಸೀಲಿಂಗಿನ ತಿದ್ದಿಯಲ್ಲಿ ಸರ್ಕಾರವೇ ಅಕ್ವೈರ್ ಮಾಡತಕ್ಕ ವ್ಯವಸ್ಥೆ ಇದ್ದು ಅದಕ್ಕೆ ಸಾಕಷ್ಟು ಕಾನೂನು ಕಟ್ಟಲೆಗಳು ಇವೆ. ಆದರೆ ಸರ್ಕಾರ ಅಕ್ವೈರ್ ಮಾಡಿ ಹಣವನ್ನು ಕೊಡುವ ವ್ಯವಸ್ಥೆ ಇದ್ದರೂ ಕೂಡಾ ಅದನ್ನು ಅಕ್ವೈರ್ ಮಾಡದೇ ವಿಶೇಷವಾದ ಒಂದು ವ್ಯವಸ್ಥೆಯಲ್ಲಿ ಈ ಸ್ಥಳವನ್ನು ಕೊಡಬೇಕಾದ ಅವಶ್ಯಕತೆ ಏನು ಇತ್ತು? ಎರಡನೆಯದಾಗಿ, ಕೊಟ್ಟಿರತಕ್ಕ ಪರದಿಯಲ್ಲಿ ಸದರೀ ಜಮೀನುಗಳನ್ನು ಬಯಲು ಪ್ರದೇಶಗಳಿಗಾಗಿ ಕಾದಿರಿಸಿರುವುದಿಂದ ''ಸದರಿ ಜಮೀನುಗಳನ್ನು ಬಯಲು ಪ್ರದೇಶವನ್ನಾಗಿಯೇ ಉಳಿಸಿಕೊಳ್ಳಬೇಕೆಂದು ನಗರ ಯೋಜನಾ ಪ್ರಾಧಿಕಾರದ ಅಭಿಪ್ರಾಯ'' ಎಂದು ತಿಳಿಸಲಾಗಿದೆ. ಅಲ್ಲಿಯ ಸ್ಟೇಡಿಯಮ್‌ನ್ನು ಮೈಸೂರಿನ ಜನ ವಂತಿಕೆ ಕೊಟ್ಟು ಕಟ್ಟಿಸಿದ್ದಾರೆ. ಅಲ್ಲಿ ಮಿಕ್ಕ ಜಾಗದಲ್ಲಿ ಟೆನ್ನಿಸ್ ಕೋರ್ಟ್ ನಿರ್ಮಾಣ ಮಾಡಬೇಕೆಂದು ಹಾಗೂ ಅಲ್ಲಿ ಒಂದು ಸ್ವಿಮ್ಮಿಂಗ್ ಪೂಲ್‌ನ್ನು ನಿರ್ಮಾಣ ಮಾಡಬೇಕೆಂದು ಇದೆ. ಈಗಾಗಲೇ ಈ ಬಗ್ಗೆ ಮಾಸ್ಟರ್ ಪ್ಲಾನ್ ಕೂಡಾ ಆಗಿರುತ್ತದೆ.

ತಾವು ತಪ್ಪು ಉತ್ತರದಲ್ಲಿ ಅಲ್ಲಿ ಮನೆ ಇದೆ ಎಂದು ಹೇಳಿದ್ದೀರಿ. ನಾನು ನಗರಾಭಿವೃದ್ಧಿ ಸಚಿವರಲ್ಲಿ ಪ್ರಾರ್ಥನೆ ಮಾಡುತ್ತೇನೆ. ಅಲ್ಲಿ ಯಾವುದೇ ಮನೆಯೂ ಬಂದಿಲ್ಲ. ಹಿಂದೆ ಯಾವುದೋ ಒಂದು ಕಾಲದಲ್ಲಿ ಅಲ್ಲಿ ಗೋಪಾಲಗೌಡರ ಹೆಸರಿನಲ್ಲಿ ಒಂದು ಆಸ್ಪತ್ರೆ ಬಂದಿದೆ. ಬೇರೆ ಯಾರೂ ಅಲ್ಲಿ ಕಟ್ಟಿದ ಕಟ್ಟಲು ಮುಂದೆ ಬರುತ್ತಾ ಇರಲಿಲ್ಲ. ಆಗ ಅಲ್ಲಿ ಗೋಪಾಲಗೌಡರ ಆಸ್ಪತ್ರೆ ಬಂತು. ಅದನ್ನು ಬಿಟ್ಟರೆ ಮಿಕ್ಕಿದ್ದು ಹಿಂದಿನ ಕಾಲದಲ್ಲಿ ಅರಮನೆಯ ನೌಕರರಿಗೆ ಸಣ್ಣಪುಟ್ಟ ಕ್ವಾರ್ಟರ್ಸ್ ಕಟ್ಟಿದ್ದರು. ಅದು ಮೈದಾನ ಮತ್ತು ಉದ್ಯಾನವನಕ್ಕೆ ಏಸಲು ಇಟ್ಟ ಜಾಗ. ಮೈಸೂರು ಟೌನ್ ಪ್ಲಾನಿಂಗ್ ನವರೂ ಇದನ್ನು ಪೂರ್ಣವಾಗಿ ವಿರೋಧ ಮಾಡಿಕೊಂಡು ಬಂದಿದ್ದಾರೆ. ಅಲ್ಲಿ ಸ್ಟೇಡಿಯಂ ಇರುವುದರಿಂದ ಅಲ್ಲಿ ಬಿಲ್ಡಿಂಗ್‌ಗಳು ಬಂದರೆ ನಗರದ ಸೌಂದರ್ಯಕ್ಕೆ ಧಕ್ಕೆ ಬರುತ್ತದೆ ನಗರದ ಸೌಂದರ್ಯ ಕೆಡಬಾರದು. ಅಲ್ಲಿ ಹೊಸದಾಗಿ ಬಂದ ಸ್ಟೇಡಿಯಂ ನಗರ ಸೌಂದರ್ಯಕ್ಕೆ ಮೆರುಗು ಕೊಟ್ಟಿದೆ. ಅಲ್ಲಿ ಬಿಲ್ಡಿಂಗ್ ಬಂದರೆ ಸ್ಟೇಡಿಯಂಗೆ ಅದು ಅಡ್ಡಿ ಬರುತ್ತದೆಂದೂ ಆದುದರಿಂದ ಇದಕ್ಕೆ ಅನುಮತಿ ಕೊಡಬಾರದು ಎಂದು ಟೌನ್ ಪ್ಲಾನಿಂಗ್‌ನವರು ಪೂರ್ಣ ತಿರಸ್ಕಾರವನ್ನು ಮಾಡಿದ್ದಾರೆ. ಈ

ಬಗ್ಗೆ ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ಯಾವ ರೀತಿಯ ವರದಿಯನ್ನು ಕೊಟ್ಟರೋ ನನಗೆ ಗೊತ್ತಿಲ್ಲ. ಈ ಪ್ರದೇಶದ ಸುತ್ತಮುತ್ತ ಬಹಳ ಕಟ್ಟಡಗಳು ತಲೆ ಎತ್ತಿವೆ. ಇಲ್ಲಿ ಏನಾದರೂ ಒಂದು ಕಟ್ಟಡ ತಲೆ ಎತ್ತಿದರೂ ಮೈಸೂರು ನಗರದ ಸೌಂದರ್ಯದ ದೃಷ್ಟಿಯಿಂದ ರಾಜಕೀಯ ಪಕ್ಷವನ್ನೆಲ್ಲಾ ಮರೆತು, ಆ ಜಾಗದಲ್ಲಿ ನಾವು ಸತ್ಯಾಗ್ರಹ ಮಾಡುತ್ತೇವೆಂದು ನಾನು ಹೇಳುತ್ತಿದ್ದೇನೆ. ಈ ಜಮೀನಿನ ವಿಷಯದಲ್ಲಿ ಪಕ್ಷ ಭೇದ ಬಿಟ್ಟು ಮೈಸೂರು ನಗರದ ಸೌಂದರ್ಯವನ್ನು, ಅರಮನೆಯ ಸೌಂದರ್ಯವನ್ನು ಉಳಿಸುವುದಕ್ಕೆ, ಅಲ್ಲಿರತಕ್ಕ ಸ್ಪೇಡಿಯಂನ್ನು ಉಳಿಸುವುದಕ್ಕೆ ಪಕ್ಷದ ಭೇದವನ್ನು ಬಿಟ್ಟು ಸತ್ಯಾಗ್ರಹ ಮಾಡುತ್ತೇವೆ. ಈಗಾಗಲೇ ಮೈಸೂರು ನಗರದಲ್ಲಿ ಈ ಬಗ್ಗೆ ಒಂದು ಹೋರಾಟ ಶುರು ಆಗಿದೆ. ಈ ವಿಷಯದ ಬಗ್ಗೆ ಕಮ್ಯುನಿಸ್ಟರು ವಿರೋಧ ಮಾಡಿದ್ದಾರೆ, ಕಾಂಗ್ರೆಸ್ಸಿನವರು ವಿರೋಧ ಮಾಡಿದ್ದಾರೆ, ನಮ್ಮ ಪಕ್ಷದವರು ವಿರೋಧ ಮಾಡಿದ್ದಾರೆ. ಇಷ್ಟು ವಿರೋಧ ಇದ್ದರೂ ಕೂಡಾ ತಾವು ಏಕೆ ವಿಚಾರದಲ್ಲಿ ಗಮನ ಕೊಡುತ್ತಿಲ್ಲ?

ಶ್ರೀ ಬಿ. ಎಂ. ಇದಿನಬ್ಬ.—ಇಲ್ಲಿ ಪಕ್ಷಗಳ ವಿಚಾರ ಏತಕ್ಕೆ ಬರುತ್ತದೆ?

ಅಧ್ಯಕ್ಷರು.—ನೀವು ಭಾಷಣ ಮಾಡಬೇಡಿ. ಕ್ಲಾರಿಫಿಕೇಷನ್ ಮಾತ್ರ ಕೇಳಿ?

ಶ್ರೀ ವೇದಾಂತ ಹೆಬ್ಬಾರ್—ನಾನು ಹೇಳಿದ್ದೇನೆಂದರೆ, ಸುಂದರವಾದಂಥ ಮೈಸೂರು ನಗರ ಹಾಳಾಗದಂತೆ ತಡೆಗಟ್ಟಲು ಮತ್ತು ಈ ಹಿಂದೆ ಕಟ್ಟಿರುವ ಅಲ್ಲಿನ ಅರಮನೆಯ ಸೌಂದರ್ಯವನ್ನು ಉಳಿಸುವುದಕ್ಕಾಗಿ ಪಕ್ಷ ಭೇದ ಬಿಟ್ಟು ಹೋರಾಟ ಮಾಡುವುದಕ್ಕೆ ನಾವು ತಯಾರಾಗಿದ್ದೇವೆ ಎಂದು. ಒಂದು ವೇಳೆ ಈ ನಗರ ಭೂ (ಪರಿಮಿತಿ ಮತ್ತು ನಿಯಮ) ಕಾಯಿದೆ ಅಡಿಯಲ್ಲಿ ಇವರುಗಳಿಗೆ ತಮ್ಮ ಜಮೀನನ್ನು ಮಾರಾಟ ಮಾಡಲು ಅನುಮತಿ, ಕೊಡುವುದಿದ್ದರೆ ಆ ಜಮೀನನ್ನು ಸರ್ಕಾರವೇ ಸ್ವಾಧೀನ ಪಡಿಸಿಕೊಳ್ಳಲಿ. ಇವರಿಗೆ ಜಮೀನು ಮಾರಾಟ ಮಾಡಲು ಕೆಲವು ಷರತ್ತುಗಳಿಗೊಳಪಟ್ಟು ಅನುಮತಿ ನೀಡಲಾಗಿದೆ. ಈ ಷರತ್ತಿನ ಎರಡನೇ ಕಲಂನಲ್ಲಿ ಈ ರೀತಿ ಹೇಳಿದ್ದಾರೆ.—"ಕೇಂದ್ರ ಸರ್ಕಾರದ ಸಂತ್ತೋಲೆ ಸಂಖ್ಯೆ.೯/೪೮/೭೬ -ಯುಸಿಯು ದಿನಾಂಕ ೭-೫-೧೯೬೦ರಲ್ಲಿನ ಸೂಚನೆಗಳನ್ನು ತಪ್ಪದೆ ಪಾಲಿಸತಕ್ಕದ್ದು" ಎಂದು. ಅಂದರೆ ಕೇಂದ್ರ ಸರ್ಕಾರದವರು ಈ ಸರ್ಕಾರಕ್ಕೆ ಏನು ಸೂಚನೆ ಕೊಟ್ಟಿದ್ದಾರೆಂಬುದು ನಮಗೆ ಗೊತ್ತಿಲ್ಲ. ಮಾನ್ಯ ಸಚಿವರು ಈ ಖಾತೆಯನ್ನು ವಹಿಸಿಕೊಂಡ ಮೇಲೆ ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ. ಆದ್ದರಿಂದ ದಯಮಾಡಿ ಈಗ ಅವರಿಗೆ ಕೊಟ್ಟಿರುವ ಅನುಮತಿಯನ್ನು ವಾಪಸ್ ಪಡೆಯಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮೈಸೂರು ನಗರದ ಸೌಂದರ್ಯದ ದೃಷ್ಟಿಯಿಂದಲಾದರೂ ಇದನ್ನು ವಾಪಸ್ ಪಡೆಯಬೇಕು. ಇಲ್ಲದಿದ್ದರೆ ಆ ಜಮೀನನ್ನು ಸರ್ಕಾರದವರೇ ಸ್ವಾಧೀನಪಡಿಸಿಕೊಂಡು ಅವರಿಗೆ ಪರಿಹಾರ ಕೊಡುವ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ಎಂ. ಚಿಕ್ಕಬೋರಯ್ಯ.—ಈ ನಗರ ಭೂ ಪರಿಮಿತಿ ಕಾಯಿದೆ ೧೯೬೬ರಲ್ಲಿ ಜಾರಿಗೆ ಬಂತು. ಈ ಕಾಯಿದೆಯ ಪರಿಚ್ಛೇದ ೨೦(೧)(ಬಿ) ಅಡಿಯಲ್ಲಿ ಇವರುಗಳು ೧೨ ಎಕರೆ ಜಮೀನನ್ನು ಮಾರಾಟ ಮಾಡಲು ಯಾವಾಗ ಅರ್ಜಿ ಸಲ್ಲಿಸಿದರು ಎಂಬುದನ್ನು ಇಲ್ಲಿ ತಿಳಿಸಿಲ್ಲ? ಅರ್ಜಿ ಕೊಟ್ಟ ದಿನಾಂಕವನ್ನು ತಿಳಿಸಬೇಕು. ಮತ್ತೆ ಎರಡನೆಯದಾಗಿ ಈ ರೀತಿ ವಿನಾಯಿತಿ ಕೊಡುವಾಗ, ಅವರಿಗೆ ಸಾಲದ ಹೊರೆ ಏನಾದರೂ ಇದ್ದರೆ ಮಾತ್ರ ವಿನಾಯಿತಿ ಕೊಡಬೇಕು ಎಂಬ ನಿಯಮವು ಏನಾದರೂ ಇದೆಯೇ? ಅಂತಹ ನಿಯಮವಿದ್ದರೆ ಇಲ್ಲಿಯವರೆಗೆ ಸಾಲದ ಹೊರೆ ಇದ್ದಂಥ ಎಷ್ಟು ಜನರಿಗೆ ಈ ರೀತಿ ವಿನಾಯಿತಿ ಕೊಡಲಾಗಿದೆ ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು?

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಚಿಕ್ಕಬೋರಯ್ಯನವರ ಪ್ರಶ್ನೆಗೆ ಮೊದಲನೆಯದಾಗಿ ಮಾನ್ಯ ಅಧ್ಯಕ್ಷರೇ, ವಿವರಣೆ ಕೊಡುತ್ತೇನೆ. ಏನೆಂದರೆ, ಈ ಕಾಯಿದೆ ಅನುಷ್ಠಾನದಲ್ಲಿ ಬರುವುದಕ್ಕೆ ಮೊದಲೇ ಯಾರಾದರೂ ಆರ್ಥಿಕ ಸಂಕಷ್ಟಕ್ಕೆ ಒಳಗಾಗಿದ್ದರೆ, ಆ ಕುಟುಂಬದ ಮೇಲೆ ಸಾಲದ ಹೊರೆ ಇದ್ದರೆ, ಅದನ್ನು ಪರಿಗಣಿಸಿ ಅವರ ಸಂಕಷ್ಟವನ್ನು ನಿವಾರಣೆ ಮಾಡುವ ಸಲುವಾಗಿ ಈ ರೀತಿಯಿಂದ ಜಮೀನನ್ನು ಮಾರಾಟ ಮಾಡಲು ವಿನಾಯಿತಿ ನೀಡಬಹುದೆಂದು ಈ ಕಾಯಿದೆಯಲ್ಲಿಯೇ ಹೇಳಿದ್ದಾರೆ. ಈ ಕಾಯಿದೆಯ ಪರಿಚ್ಛೇದ ೨೦೧(ಬಿ)ನಲ್ಲಿ ಅಂಥಾದ್ದಕ್ಕೆ ಅವಕಾಶವಿದೆ. ಮತ್ತೆ ಈ ಸಂಬಂಧದಲ್ಲಿ ಕೇಂದ್ರ ಸರ್ಕಾರದಿಂದ ಬಂದಿರುವ ಸುತ್ತೋಲೆಯಲ್ಲಿ ಏನು ಹೇಳಿದ್ದಾರೆಂದು ಮಾನ್ಯ ಹೆಬ್ಬಾರ್‌ರವರು ಕೇಳಿದ್ದಾರೆ. ಅದರಲ್ಲಿ ಏನು ಹೇಳಿದ್ದಾರೆಂದರೆ, ಆರ್ಥಿಕ ಸಂಕಷ್ಟದಲ್ಲಿರುವವರಿಗೆ ಜಮೀನನ್ನು ಮಾರಾಟ

ಮಾಡಲು ವಿನಾಯಿತಿ ಕೊಡುವ ಸಂದರ್ಭದಲ್ಲಿ. ಅಂತಹ ಜಮೀನನ್ನು ಗ್ರೂಪ್ ಹೌಸಿಂಗ್ ಅಂದರೆ ಸಮೂಹ ವಸತಿ ಗೃಹಗಳನ್ನು ನಿರ್ಮಾಣ ಮಾಡುವವರಿಗೆ ಮಾರಾಟ ಮಾಡಬೇಕೆಂದು ಸುತ್ತೋಲೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಸಂಖ್ಯೆಯಲ್ಲಿ ವಸತಿಗಳು ಬರಲಿ ಎಂದು ಈ ರೀತಿ ಸುತ್ತೋಲೆಯಲ್ಲಿ ತಿಳಿಸಿದ್ದಾರೆ. ಮತ್ತೆ ಅಲ್ಲಿ ಕ್ರೀಡಾಂಗಣ ಬರುತ್ತಿರುವ ಕಾರಣ ಜಮೀನು ಮಾರಾಟ ಮಾಡಲು ಅನುಮತಿ ನೀಡಬಾರದೆಂದು ಹೇಳಿದ್ದಾರೆ. ಆದರೆ ಇಲ್ಲಿ ಕ್ರೀಡಾಂಗಣಕ್ಕೆ ಉಪಯೋಗವಾಗುತ್ತಿರುವ ಭಾಗಶಃ ಜಮೀನನ್ನು ಬಿಟ್ಟು ಮಿಕ್ಕ ಜಾಗವನ್ನು ಸಮೂಹ ವಸತಿ ಗೃಹಗಳನ್ನು ಕಟ್ಟಲು ಮಾರಾಟ ಮಾಡಬಹುದೆಂದು ಆಜ್ಞೆ ಆಗಿದೆ ಮತ್ತೆ ಇಲ್ಲಿ ಕಟ್ಟುವಂತಹ ಮನೆಗಳನ್ನು ಮೈಸೂರು ನಗರದಲ್ಲಿರುವವರಿಗೇ ಮಾರಾಟ ಮಾಡಬೇಕೆಂದು ಹೇಳಿದ್ದೇವೆ. ಮೈಸೂರು ನಗರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಸತಿ ಗೃಹಗಳು ಬರಲಿ ಮತ್ತು ಕಟ್ಟುವಂತಹ ಮನೆಗಳು ಅಲ್ಲಿನ ನಿವಾಸಿಗಳಿಗೇ ಸಿಗಲಿ ಎಂದು ಈ ಕ್ರಮ ತೆಗೆದುಕೊಳ್ಳಲಾಗಿದೆ. ಒಟ್ಟಾರೆ ಈ ಬಯಲು ಪ್ರದೇಶ ಎಂದು ಹೇಳುವುದು ನಮ್ಮ ಯೋಜನಾ ಪ್ರಾಧಿಕಾರದ ನಕ್ಷೆಯಲ್ಲಿಯೇ ಇದೆ, ಆ ರೀತಿಯ ಅವರ ಶಿಫಾರಸ್ಸು ಇದೆ. ಆದರೆ ನಾನು ಆಗಲೇ ಹೇಳಿದ ಹಾಗೆ ಒಬ್ಬ ಖಾಸಗೀ ವ್ಯಕ್ತಿಯು ಬೇರೆ ಬೇರೆ ರೀತಿಯ ತೆರಿಗೆ ಮತ್ತು ಆಸ್ತಿತೆರಿಗೆ ಕೊಡಬೇಕಾದರೆ, ಕೇಂದ್ರ ಸರ್ಕಾರಕ್ಕೆ ಇಲ್ಲಿ ೭೨ ಲಕ್ಷ ರೂಪಾಯಿಗಳನ್ನು ಅವರು ಕೊಡಬೇಕಾದ ಈ ಕಾರಣದಿಂದ ತೀರುವಳಿ ಮಾಡಬೇಕಾದರೆ, ಬೇರೆ ವಿಧಿ ಇಲ್ಲದೇ ಇದ್ದಾಗ ಅದನ್ನು ಮಾಡಿಕೊಂಡೇ ಬಾಕಿಯನ್ನು ತೀರಿಸಬೇಕಾದರೆ ಅಂತಹ ಅವಶ್ಯಕತೆ ಇರುವ ಸಮಯದಲ್ಲಿ ಪರವಾನಗಿಯನ್ನು ಕೊಡಬಹುದು ಎನ್ನುವಂಥ ನಿಯಮದ ಪ್ರಕಾರವೇ ಪರವಾನಗಿಯನ್ನು ನಾವು ಕೊಟ್ಟಿದ್ದೇವೆ ಆದ್ದರಿಂದ ವಸತಿಗೋಸ್ಕರವಾಗಿ ನಾವೇನು ಕೊಡಬೇಕಾಗಿ ಬಂತೋ ಅದರ ರೂಪ ಬದಲಾವಣೆ ಮಾಡಬೇಕಾಗಿದೆ ಮತ್ತು ನಾವು ಮಾಡಿದ್ದೇವೆ. ಕ್ರೀಡಾಂಗಣಕ್ಕಾಗಲೀ ಆಥವಾ ಸುತ್ತುಬರುವಂಥ ಯಾವುದೇ ಕಟ್ಟಡವಾಗಲೀ, ಅಲ್ಲಿ ಈ ಮೈಸೂರು ಸಹೋದರಿಯರ ಜಮೀನಿನಲ್ಲಿ ಯಾರಾದರೂ ಹೋಗುವಹಾಗಿತ್ತು, ಎಂದರೆ ಅದು ಬಿಟ್ಟು ಬೇರೆ ಜಾಗವನ್ನು ಕೊಡುವಂಥ ಆದೇಶವನ್ನು ಕೊಟ್ಟಿರುವುದರಿಂದ ಈ ಒಂದು ಕ್ರಮವನ್ನು ತೆಗೆದುಕೊಳ್ಳಲಾಗಿದೆ.

ಶ್ರೀ ವೇದಾಂತ ಹೆಮ್ಮಿಗೆ.—ಸಾಲ ತೀರಿಸಿಕೊಳ್ಳುವುದಕ್ಕೆ ಸಹಾಯ ಮಾಡಬೇಕೆನ್ನುವುದಕ್ಕೆ ನಾವು ಯಾರೂ ಕೂಡ ಅಡ್ಡಿ ಬರುವುದಿಲ್ಲ. ಆದರೆ ಈ ಕಂಡೀಶನ್ಸ್‌ನಲ್ಲಿ ಕ್ರೀಡಾಂಗಣಕ್ಕೆ ಬರತಕ್ಕಂಥ ಯಾವುದು ಇಲ್ಲಿ ಬಿಲ್ಡಿಂಗ್‌ಗಳು ಇರಲಿ, ಸಮೂಹ ಗೃಹಗಳು ಏನು ಬರುತ್ತವೆ. ಇದು ಅವಕ್ಕೆ ಅಡ್ಡಿ ಬರಬಾರದು ಎಂದು ಹೇಳಿ ಈ ಕಂಡೀಶನ್ಸ್‌ನಲ್ಲಿ ಒಂದೂ ಇಲ್ಲ. ಮಾನ್ಯ ಸಚಿವರಿಗೆ ಗೊತ್ತು. ಈ ಕಂಡೀಶನ್‌ನಲ್ಲಿ ಕೂಡ ಬರತಕ್ಕಂಥ ಸಾರ್ವಜನಿಕ ಮನೆಗಳು ಏನಿವೆ ಅವು ಈ ಕ್ರೀಡಾಂಗಣಕ್ಕೆ ಅಡ್ಡ ಬರಬಾರದು. ಎರಡನೇಯದು ನೂರಾರು ಶತಮಾನಗಳ ಕಾಲ ಇತಿಹಾಸವನ್ನು ಹೊಂದಿರತಕ್ಕಂಥ ಅರಮನೆ ಏನಿದೆ ಅಲ್ಲಿ, ಆ ಅರಮನೆಗೆ ಅದರ ಸೌಂದರ್ಯವನ್ನು ಕೆಡಿಸಲಿಕ್ಕೆ ಅಡ್ಡ ಬರಬಾರದು. ಮೂರನೆಯದು ನಗರ ಯೋಜನೆ ಪ್ರಾಧಿಕಾರ ಎಂದು ನಾವು ಏನು ಮಾಡಿ ವಿಧಿ ನಿಯಮಗಳನ್ನು ಹಾಕಿಕೊಂಡಿದ್ದೇವೆ, ಆ ನಿಯಮಗಳನ್ನು ಯಾವುದೇ ರೀತಿಯಿಂದ ಮೀರಬಾರದು. ಇದು ಯಾವ ಕಂಡೀಶನ್ ಅನ್ನು ಇಲ್ಲಿ ನಾವು ನೋಡಿಲ್ಲ. ಅಡ್ಡ ಬರಬಾರದು ಎಂದು ಇದೆಯೋ ಇಲ್ಲ ? ಇಲ್ಲ. ಆದ್ದರಿಂದ ನಾನು ದಯವಿಟ್ಟು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅವರಿಗೆ ಕೊಡಿರಿ, ಅವರು ಸಾಲ ತೀರಿಸಿಕೊಳ್ಳಲಿ, ನಿಮ್ಮ ಸಾಲವೂ ತೀರೀತು. ಅವರು ಹೆಣ್ಣುಮಕ್ಕಳು ಕಷ್ಟದಲ್ಲಿ ಇರಬಹುದು, ಬೇಡ ಎಲ್ಲ ನಾವು ಹೇಳುವುದಿಲ್ಲ. ಆದರೆ ನಮ್ಮ ಮೂಲ ದೃಷ್ಟಿ ಏನೆಂದರೆ ಅರಮನೆ ಮತ್ತು ಈ ಕ್ರೀಡಾಂಗಣಕ್ಕೆ ಅಡ್ಡ ಬರತಕ್ಕಂಥ ಯಾವ ವ್ಯವಸ್ಥೆ ಕೂಡ ಆಗಕೂಡದು. ದಯವಿಟ್ಟು ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಮತ್ತು ತಾವು ಇದಕ್ಕೆ ಆಶ್ವಾಸನೆಯನ್ನು ಕೊಡಬೇಕು.

ಶ್ರೀ ಪಿ. ಎಂ. ಚಿಕ್ಕಬೋರಯ್ಯ.—ಮಾನ್ಯ ಅಧ್ಯಕ್ಷರೇ, ಈ ಸಾಲವನ್ನು ತೀರಿಸಿಕೊಳ್ಳುವುದು ಒಂದೇ ಕಾರಣವಾದ ಪಕ್ಷದಲ್ಲಿ ಈ ಜಮೀನನ್ನು ಪೂರ್ತಿಯಾಗಿ ಸಿ. ಐ. ಟಿ. ಬಿ. ಗೆ ಕೊಡಿಸಬಹುದಾಗಿತ್ತು. ಅದು ಬಿಟ್ಟು ಯಾರೋ ಒಬ್ಬ ಖಾಸಗೀ ಕಂಟ್ರಾಕ್ಟರ್ ಕಾವೇರಿ ಎಸ್ಟೇಟ್ ಡೆವಲಪರ್ಸ್ ಎನ್ನುವವರಿಗೆ ಕೊಡುವ ಪ್ರಮೇಯ ಏನಿತ್ತು ಎಂಬುದು ನನ್ನ ಪ್ರಶ್ನೆ.

ಶ್ರೀ ಎ೯. ಚಂದ್ರಶೇಖರ್,—ಇದನೇ ಪರಶ್ನೆನಲ್ಲಿಯೇ ಇದ, ಓದಿ ನೋಡಿ.

" ಸದರಿ ಜಮೀನಿನಲ್ಲಿ ಸಮೂಹ ವಸತಿ ಗೃಹಗಳ ಯೋಜನೆಯು ರೂಪುರೇಷೆ, ನಕ್ಷೆ ಯನ್ನು ನಗರ ಯೋಜನಾ ಪ್ರಾಧಿಕಾರ ಮಂತ್ತು ಅಭಿವೃದ್ಧಿ ಮಂಡಲಿ, ಮೈಸೂರು ಇವರುಗಳಿಗೆ ನಿಗದಿತ ಅಭಿವೃದ್ಧಿ ಶುಲ್ಕ ಇತ್ಯಾದಿ ಪಾವತಿ ಮಾಡಿ ಅನುಮೋದನೆ ಪಡೆಯಂತಕ್ಕದ್ದು ".

ಆಗ ಯಾವ್ಯಾವ ಟ್ಯಬಿಲ್ಡಿಂಗ್ ಆಡ್ಡ ಬರುತ್ತದೆ ಅದಕ್ಕೆ ತಕ್ಕಂತೆ ಲೇಔಟ್ ಪ್ಲಾನ್ ಅನ್ನು ಅವರು ಸ್ಯಾಂಕ್ಷನ್ ಮಾಡುತ್ತಾರೆ. ಆದ್ದರಿಂದ ನಗರ ಯೋಜನ ಪ್ರಾಧಿಕಾರದ ಅಡಿಯಲ್ಲೇ ಇದು ಮಂಜೂರಾತಿ ಪಡೆಯುವುದರಿಂದ ಅದನ್ನೆಲ್ಲ ಅವರು ನೋಡುತ್ತಾರೆ. ಎರಡನೇಯದು ಸಿ. ಐ. ಟಿ. ಬಿ. ಯವರು ತೆಗೆದುಕೊಳ್ಳಬಹುದಾಗಿತ್ತು ಎಂದು ಇವರು ಹೇಳಿದ್ದಾರೆ. ಆದರೆ ಅರ್ಜಿದಾರರು ಏನು ಹೇಳಿದ್ದಾರೆ, ಅವರ ಸಂಕಷ್ಟಗಳು ಏನಿದಯೋ ಗೊತ್ತಿಲ್ಲ. ಇಂತವರಿಗೇ ಕೊಡಬೇಕು ಎಂದು ಅರ್ಜಿಯೇ ಇರುವುದರಿಂದ ಅದರ ಮೇಲೆ ನಾವು ಮಾಡಿರುವುದು ಇದೆ.

ಅಧ್ಯಕ್ಷರು.—ಈಗ ಕಂದಾಯ ಮಂತ್ರಿಗಳಿಂದ ಶ್ರೀ ಶಿವನಂಜಪ್ಪನವರ ಗಮನ ಸೆಳೆಯುವ ಸೂಚನೆಗೆ ಉತ್ತರ. ಗಮನ ಸೆಳೆದಿದ್ದಾರೆ, ನೀವು ಉತ್ತರ ಹೇಳಿ.

ಶ್ರೀ ವೇದಾಂತ ಹೆಮ್ಮಿಗೆ.—ಒಂದು ಕ್ಲಾರಿಫಿಕೇಶನ್ ಇದೆ.

ಅಧ್ಯಕ್ಷರು.—ಇಲ್ಲ ನೀವು ಸಾಕಷ್ಟು ವಿವರಗಳನ್ನು ಕೇಳಿದ್ದೀರಿ.

ಶ್ರೀ ವೇದಾಂತ ಹೆಮ್ಮಿಗೆ.—ನಮಗೆ ಮೈಸೂರಿನ ಬಗ್ಗೆ ಬಹಳಕಾಳಜಿ ಇರುವುದರಿಂದ ಕೇಳುತ್ತೇವೆ ದಯವಿಟ್ಟು ಕೇಳಿ. ಅವರಿಗೆ ಕೊಡತಕ್ಕಂಥ ಒಂದು ಕೋಟಿಯೋ, ೬೦ ಲಕ್ಷವೋ, ೫೦ ಲಕ್ಷವೋ, ಅದನ್ನು ಮೈಸೂರು ನಗರಾಭಿವೃದ್ಧಿ ಸಮಿತಿಗೇ ಪಾವತಿ ಕೊಡುತ್ತೀರಾ? ನಾವು ಅದನ್ನು ತೆಗೆದುಕೊಳ್ಳುವುದಕ್ಕೆ ರೆಡಿಯಾಗಿದ್ದೇವೆ.

ಶ್ರೀ ಎ೯. ಚಂದ್ರಶೇಖರ್.—ಅರ್ಜಿದಾರರ ಹಕ್ಕು ಇದೆ. ಅವರು ಕೇಳಿದ್ದಾರೆ, ಪರವಾನಗಿಯನ್ನು ಕೊಟ್ಟಿದ್ದೇವೆ. ಈಗ ಇದು ಮೊದಲೇ ಆಗಿದ್ದರೆ ಇದನ್ನು ಪರಿಶೀಲಿಸಬಹುದಿತ್ತು.

2 ಗ್ರಾಮಲೆಕ್ಕಾಧಿಕಾರಿಯಾಗಿ ಸೇವೆ ಸಲ್ಲಿಸಿದವರಿಗೆ ನಿವೃತ್ತಿ ವೇತನ ನೀಡುವ ಬಗ್ಗೆ

ಶ್ರೀ ಜಿ. ಎಸ್. ಶಿವನಂಜಪ್ಪ.—ಅಧ್ಯಕ್ಷರೇ, ನಾನು ಗ್ರಾಮಲೆಕ್ಕಾಧಿಕಾರಿಯಾಗಿ ಹಿಂದೆ ಸೇವೆ ಸಲ್ಲಿಸಿದವರಿಗೆ ನಿವೃತ್ತಿ ವೇತನ ನೀಡುವುದರ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಯೋಜನೆ ಮತ್ತು ನೀರಾವರಿ ಸಚಿವರು).—ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಶಾಶ್ವತಸೇವೆಯಲ್ಲಿರುವವರಾಗಿ ೧-೨-೬೩ ರಿಂದ ಕೆಲಸದಲ್ಲಿ ಮುಂದುವರೆದು ಗ್ರಾಮಲೆಕ್ಕಾಧಿಕಾರಿಯಾಗಿ ಸೇವೆ ಸಲ್ಲಿಸಿರುವವರಿಗೆ ನಿವೃತ್ತಿ ವೇತನವನ್ನು ಮಂಜೂರು ಮಾಡಬೇಕೆಂದು ಮಾನ್ಯ ಸದಸ್ಯರು ಗಮನ ಸೆಳೆದಿದ್ದಾರೆ.

೧೯೬೧ರ ಕರ್ನಾಟಕ ಗ್ರಾಮಾಧಿಕಾರಿಗಳ ರದ್ದಿಯಾತಿ ಕಾಯಿದೆ ಪ್ರಕಾರ ಅನುವಂಶಿತ ಮತ್ತು ಇತರೇ ಗ್ರಾಮಾಧಿಕಾರಿಗಳ ಹುದ್ದೆಗಳನ್ನು ರದ್ದುಗೊಳಿಸಲಾಯಿತು ಈ ಕಾಯಿದೆ ೧-೨-೧೯೬೩ ರಿಂದ ಜಾರಿಗೆ ಬಂದಿದೆ.

ಅನುವಂಶಿತ ಹಾಗೂ ಇತರೇ ಗ್ರಾಮಾಧಿಕಾರಿಗಳ ಹುದ್ದೆಗಳನ್ನು ರದ್ದುಗೊಳಿಸುವಾಗ ಅನುವಂಶಿತ ಗ್ರಾಮಾಧಿಕಾರಿಗಳನ್ನು ಗ್ರಾಮಾಲೆಕ್ಕಾಧಿಕಾರಿಯಾಗಿ ನೇಮಿಸಲು ಅವಕಾಶವಿತ್ತು ೧೯೬೧ ಮತ್ತು ೧೯೭೦ರ ಶ್ರೇಣಿ ಮತ್ತು ನೇಮಕಾತಿ ನಿಯಮಗಳ ಪ್ರಕಾರ, ಅರ್ಹತೆಯುಳ್ಳ ಅನುವಂಶಿತ ಗ್ರಾಮಾಧಿಕಾರಿಗಳನ್ನು ಗ್ರಾಮಲೆಕ್ಕಾಧಿಕಾರಿಗಳನ್ನಾಗಿ ನೇಮಿಸಲು ಅವಕಾಶವಿತ್ತು. ನಿಯಮಗಳ ಪ್ರಕಾರ ನೇಮಕಗೊಂಡ ಶಾಶ್ವತಸೇವೆಗಾರರುಗಳಿಗೆ ಸರ್ಕಾರಿ ಆದೇಶ ಸಂಖ್ಯೆ. ಆರ್‌ಡಿ ೧೮೨ ಎಂವಿಎಸ್ ೭೭, ದಿನಾಂಕ ೨೯-೧೧-೭೯ರನ್ವಯ ನಿವೃತ್ತಿ ವೇತನವನ್ನು ನೀಡಲು ಆದೇಶಿಸಲಾಯಿತು, ಈ ಆದೇಶವನ್ನು ಆರ್‌ಡಿ ೨೫೬ ಎಂವಿಎಸ್ ೮೪, ದಿನಾಂಕ ೨೧-೧೧-೮೫ರ ಆದೇಶದಲ್ಲಿ ಪರಿಷ್ಕರಿಸಲಾಗಿದೆ, ಅದರಂತೆ ನೇಮಕಾತಿ ನಿಯಮಗಳಂತೆ ಸಕ್ರಮವಾಗಿ ನೇಮಕವಾಗದೆ ಇರುವ ಶಾಶ್ವತಸೇವೆಗಾರರುಗಳಿಗೆ ನಿವೃತ್ತಿ ವೇತನ ನೀಡಲು ಬರುವುದಿಲ್ಲ.